# <u>ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಪ್ರಗತಿ ವರದಿ</u>

(ನವೆಂಬರ್ – 2013)

2013-14 ನೇ ಸಾಲಿನಲ್ಲಿ ಎಂಜಿಎನ್‌ಆರ್‌ಜಿಎಸ್ ಯೋಜನೆಯಡಿ ನವೆಂಬರ್ -2013 ರ ಅಂತ್ಯಕ್ಕೆ ಮುಂದುವರೆದ ಕಾಮಗಾರಿಗಳನ್ವಯ ಹಾಗೂ ಇತರೆ ಕಾಮಗಾರಿಗಳಿಗೆ ರೂ.301.266 ಕೋಟಿಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಲ್ಲಿಸಿದ್ದು, ಇದರಲ್ಲಿ ಈಗಾಗಲೇ ರೂ.246.997 ಕೋಟಿಗಳಿಗೆ ಅನುಮೋದನೆ ಪಡೆಯಲಾಗಿದೆ. ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿ ರೂ.31.667 ಕೋಟಿಗಳಿಗೆ ವೆಚ್ಚ ಭರಿಸಲಾಗಿದೆ.

ಎಂಜಿಎನ್‌ಆರ್‌ಜಿಎಸ್ ಯೋಜನೆಯಲ್ಲಿ ಕೆಟಿಪಿ-ಎಂಎಂಆರ್ ಪ್ರಗತಿ ವರದಿ ಪ್ರಕಾರ 6560 ಹೆ. ನೆಡುತೋಪು ನಿರ್ಮಾಣ ಗುರಿಯನ್ನು ಹೊಂದಿದ್ದು, ಇದರಲ್ಲಿ 5523 ಹೆ. (84%) ನೆಡುತೋಪು ನಿರ್ಮಾಣ ಮಾಡಲಾಗಿದೆ ಹಾಗೂ 94.00 ಲಕ್ಷ ಸಸಿಗಳ ವಿತರಣೆಯ ಗುರಿಯನ್ನು ಹೊಂದಿದ್ದು ಇದರಲ್ಲಿ 99.629 ಲಕ್ಷ (106%) ಸಸಿಗಳನ್ನು ವಿತರಣೆ ಮಾಡಲಾಗಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ), ಬೆಂಗಳೂರು.

**ಯೋಜನೆ :ಸಾಮಾಜಿಕ ಅರಣ್ಯ (ಮೂಲತಹ ವಿಶೇಷ ಅಭಿವೃದ್ಧಿ ಯೋಜನೆ)**

2013-14ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.2122.50 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ. 3199 ಹೆ. ನೆಡುತೋಪು ನಿರ್ಮಾಣ ಹಾಗೂ 10750 ಹೆ. ನೆಡುತೋಪು ಪೋಷಣೆ ಕಾಮಗಾರಿಗಳ ಕೈಗೊಳ್ಳುವ ಗುರಿಯನ್ನು ಹೊಂದಿದ್ದು, ನವೆಂಬರ್-2013ರ ಮಾಹೆಯ ಅಂತ್ಯಕ್ಕೆ 2935 ಹೆ. ನೆಡುತೋಪು ನಿರ್ಮಾಣ ಹಾಗೂ 10750 ಹೆ. ನೆಡುತೋಪು ಪೋಷಣೆ ಕಾಮಗಾರಿಯನ್ನು ಮಾಡಲಾಗಿದ್ದು, ಇದಕ್ಕೆ ರೂ.1534.11 ಲಕ್ಷಗಳು ಬಿಡುಗಡೆಯಾಗಿದೆ. ಇದರಲ್ಲಿ ರೂ.1035.16 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

**ಯೋಜನೆ : ಕಟ್ಟಗಳು ( ಸಾಮಾಜಿಕ ಅರಣ್ಯ)**

ಈ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ವಸತಿಗೃಹಗಳ ನಿರ್ಮಾಣ ಮತ್ತು ನಿರ್ವಹಣೆ. ಅಲ್ಲದೇ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳ ಗುರಿ ಹೊಂದಲಾಗಿದೆ ಒಟ್ಟಾರೆ 159 ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ ಕಾಮಗಾರಿಗಳ ಭೌತಿಕ ಗುರಿ ಇದ್ದು, ಇದಕ್ಕೆ ರೂ.346.00 ಲಕ್ಷಗಳ ಆರ್ಥಿಕ ಗುರಿಯಿದ್ದು, ನವೆಂಬರ್-2013ರ ಮಾಹೆಯ ಅಂತ್ಯಕ್ಕೆ ರೂ.146.00 ಲಕ್ಷಗಳು ಬಿಡುಗಡೆಯಾಗಿದೆ. ಸದರಿ ಕಾಮಗಾರಿಗಳಗೆ ರೂ.36.190 ಲಕ್ಷ ವೆಚ್ಚ ಭರಿಸಲಾಗಿರುತ್ತದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ), ಬೆಂಗಳೂರು.